

# ಇಂದಿರಾ-ರಾಹುಲ್ ಅಪರೂಪದ ಕ್ಷಣ

ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ರಾಷ್ಟ್ರ ಕಂಡ ಶ್ರೇಷ್ಠ ನಾಯಕರಲ್ಲೊಬ್ಬರು. ಅವರಂತೆಯೇ ಪ್ರಧಾನಿ ಆಗುವ ಕನಸು ಹೊತ್ತವರು ಅವರ ಮೊಮ್ಮಗ ರಾಹುಲ್ ಗಾಂಧಿ. ಬಾಲ್ಯದಿಂದಲೂ ಅಜ್ಜಿ ಇಂದಿರಾ ಅವರನ್ನು ಕಂಡರೆ ರಾಹುಲ್‌ಗೆ ಅಚ್ಚುಮೆಚ್ಚು. ಬಾಲ್ಯದಲ್ಲಿದ್ದಾಗ ರಾಹುಲ್ ತನ್ನ ಕೋಮಲ ಕೈಗಳಿಂದ ಇಂದಿರಾ ಅವರಿಗೆ ಚಹಾ ಕುಡಿಸುತ್ತಿರುವ ದೃಶ್ಯ ಅಪರೂಪಗಳಲ್ಲೊಂದು ಅಪರೂಪದ್ದು. ಈ ಚಿತ್ರವನ್ನು ಇಂದಿರಾಗಾಂಧಿ ಸ್ಮಾರಕ ಟ್ರಸ್ಟ್ ಪ್ರಕಟಿಸಿತ್ತು.

■ ಪಂಡಿತರಾವ ಪಾಟೀಲ, ಸರಸಂಬಾ

# ಲಾವಂಚ

ಲೆಮೆನ್‌ಗ್ರಾಸ್ (ಮಜ್ಜಿಗೆ ಹುಲ್ಲು)ದ ಎಲೆ, ಕಾಂಡ, ಬೇರುಗಳೆಲ್ಲವೂ ಸುವಾಸನೆ ಭರಿತವಾಗಿರುತ್ತವೆ. ಇದನ್ನು ಲಾವಂಚ ಹಾಗೂ ಸುಗಂಧಿ ಹುಲ್ಲು ಎಂದೂ ಕರೆಯಲಾಗುತ್ತದೆ. ಇದು ಮೂಲತಃ ಹುಲ್ಲುಗಿಡ. ಸಸ್ಯ ಶಾಸ್ತ್ರೀಯವಾಗಿ ಪೋಯೇಸಿ (poaceae) ಗ್ರಾಮಿನೆ ಎಂಬ ಪ್ರಭೇದಕ್ಕೆ ಸೇರಿದೆ. ಎಲ್ಲಾ ತರದ ಮಣ್ಣಿನಲ್ಲಿ ಬೆಳೆಯುವ ಹುಲ್ಲಿದು. ಇದು ತೀಕ್ಷ್ಣ ವಾಸನೆಯಿಂದ ಕೂಡಿದೆ. ಹೀಗಾಗಿಯೇ ಇದನ್ನು ಜಾನುವಾರುಗಳು ತಿನ್ನವುದಿಲ್ಲ.

ಈ ಹುಲ್ಲಿನ ಹಾಸುಪಾಸು ಕ್ರಿಮಿಕೀಟಗಳು ಹಾಗೂ ಸೊಳ್ಳೆಗಳು ಸುಳಿಯುವುದಿಲ್ಲ. ಈ ಹುಲ್ಲಿನ ಕಾಂಡದಿಂದ ಮಾಡಿದ ವಸ್ತುಗಳು ಕೀಟನಾಶಕವಾಗಿ ಕೆಲಸ ಮಾಡುತ್ತದೆ. ಹೀಗಾಗಿ, ಮನೆಯಲ್ಲಿಟ್ಟುಕೊಳ್ಳಬಹುದು. ಈ ಹುಲ್ಲಿನಿಂದ ತಯಾರಿಸಿದ ಎಣ್ಣೆಯು ಮೈಕೈ ನೋವಿಗೆ ರಾಮ ಬಾಣವಿದ್ದಂತೆ. ನೆಗಡಿ, ಶೀತ, ಕೆಮ್ಮಿಗೆ ಇದರಿಂದ ಮಾಡಿದ ಕಷಾಯ ಅತ್ಯಂತ ಪರಿಣಾಮಕಾರಿ. ಜ್ವರ, ಉದರಶೂಲೆ, ಉರಿಶಮನ, ವಾಂತಿ–ಭೇದಿ ಬಂಧಕವಾಗಿಯೂ ಇದರ ರಸ ಉಪಯುಕ್ತ. ಕಣ್ಣಿಗೆ ತಂಪು, ಕೇಶವರ್ಧಕವಾಗಿಯೂ ಇದರ ಎಣ್ಣೆಯನ್ನು ಬಳಸಬಹುದು. ನಿತ್ಯ ಇದರ ಹುಲ್ಲು ವಾಸನೆ ಸೇವನೆ ಅತ್ಯುಪಯುಕ್ತವೆಂಬುದು ಆಯುರ್ವೇದಗಳ ಅಂಭೋಣ.

■ ಎಸ್. ಓಂಕಾರಯ್ಯ, ತವನಿಧಿ, ದಾವಣಗೆರೆ





# ತ್ಯಾಜ್ಯದಿಂದ ಅಲಂಕಾರ

ಸೃಜನಶೀಲತೆಗೆ ಕೊನೆ ಎಂಬುದೇ ಇರುವುದಿಲ್ಲ. ವ್ಯಕ್ತಿಯು ತನ್ನ ವಿಭಿನ್ನ ದೃಷ್ಟಿಕೋನ ಹೆಚ್ಚಿಸಿಕೊಂಡಂತೆ ಅವನ ಸೃಜನಶೀಲತೆಯೂ ಹಿಗ್ಗುತ್ತಾ ಸಾಗುತ್ತದೆ. ಬೆಂಗಳೂರಿನ ಜಗದೀಶ್ ಎಂಬುವವರು ತಮ್ಮದೇ ಶೈಲಿಯ ಸೃಜನಶೀಲತೆ ಮೂಲಕ ವಿವಿಧ ಕಲಾಕೃತಿಗಳನ್ನು ತಯಾರಿಸಿ ಗಮನ ಸೆಳೆದಿದ್ದಾರೆ. ಒಣಗಿ ಉದುರಿದ ಅರಳಿ ಎಲೆ, ಒಣಗಿದ ಎಕ್ಕದ ರೆಂಬೆ, ಬಿದಿರಿನ ಬುಟ್ಟಿ, ಪೇಪರ್ ಸಹಾಯದಿಂದ ಪುಟ್ಟ ಗಿಡದ ಮೇಲೆ ಹಕ್ಕಿಗಳು ಕುಳಿತಿರುವಂತೆ ಅದ್ಭುತ ಕಲಾಕೃತಿ ರಚಿಸಿದ್ದಾರೆ.

■ ಈರಣ್ಣ ಬೆಂಗಾಲಿ, ರಾಯಚೂರು